ವಾದ ಶೀರ್ಮಾನವನ್ನು ತೆಗೆದುಕೊಂಡಿದೆ. ಇನ್ನು ಸಮಾಜಕ್ಕೊಕ್ಕರ ಹೆಚ್ಚು ಉಪಯೋಗ ಆಗಲಿ ಎಂದು ಈ ಯೋಜನೆಯನ್ನು ರೂಪಿಸಿದ್ದೇವೆ. ಇದರಿಂದ ನಿಮ್ಮ ಮನಸ್ಸಿನ ಆತಂಕ ಕಳಕಳಿ ಉಳಿಯುವುದಿಲ್ಲ, ನಿವಾರಣೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ಮಾನ್ಯ ಎಂ. ಪಿ. ಪ್ರಕಾಶ್‌ರವರ ಪ್ರಶ್ನೆ ಬಂದಾಗ ಇದನ್ನು ರೆಫರ್ ಮಾಡಿದ್ದೇನೆ. ರಾಜ್ಯದಲ್ಲಿ ಎಲ್ಲೆಲ್ಲಿ ದೊಡ್ಡ ಜಲಾಶಯಗಳಿಂದ ಮಧ್ಯಮ ಜಲಾಶಯಗಳಿಂದ ನೀರು ಕೊಡಲಿಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಭೂಮಿಯಲ್ಲಿ ನಮಗೆ ಹೆಚ್ಚು ಹೆಚ್ಚು ನೀರು ಎಲ್ಲೆಲ್ಲಿ ಸಿಗುತ್ತದೆಂದು ನಮಗೆ ಗೋಚರವಾಗುತ್ತದೋ ಮತ್ತು ತಜ್ಞರು ಕೊಡತಕ್ಕಂಥ ವರದಿಯ ಆಧಾರದ ಮೇಲೆ ಸಿಗತಕ್ಕಂಥ ಭೂಗರ್ಭದ ಜಲವನ್ನು ಖುಷ್ಕಿ ಬೆಳೆಯನ್ನು ಯಾರು ಬೆಳೆಯುವರು ಇದ್ದಾರೆ, ಅಂಥವರಿಗೆ ಅನುಕೂಲ ಮಾಡಲಿಕ್ಕೆ ಈ ಸ್ಕೀಮನ್ನು ವಿಸ್ತರಣೆ ಮಾಡಬೇಕು ಎಂದು ನಮ್ಮ ಅಭಿಪ್ರಾಯ ಏನು ಇದೆ, ಅದನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಾದ ಶ್ರೀ ಎಂ. ಪಿ. ಪ್ರಕಾಶ್‌ರವರಿಗೂ ಸಹಾ ಹೇಳಿದ್ದೇನೆ. ಇದರ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸುವವರಿದ್ದೇವೆ.

ಅಧ್ಯಕ್ಷರು.—ಪಾಟೀಲರೇ, ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ. ಕಾಣಡೆಯವರೇ ನಿಮ್ಮ ಪ್ರಶ್ನೆ ಕೇಳಿ.

ಸರಕಾರಿ ಮುದ್ರಣಾಲಯದ ಕೆಲಸಗಾರರ ವಿರುದ್ಧ ಕೈಕೊಂಡ ಕ್ರಮ

೩೫೫ (ಜೆ ಎ) ಶ್ರೀ ಗೋಪಾಲ ಮುಕುಂದ ಕಾಣಡೆ (ಪಿರ್ಸಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿನ ಕೆಲಸಗಾರರ ಗೈರು ಹಾಜರಿಯ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದ್ದರೂ ಈ ವರೆವಿಗೂ ಯಾವ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಈ ಪ್ರಕರಣದಲ್ಲಿ ಸಿ. ಒ. ಡಿ. ಯಿಂದ ತನಿಖೆ ನಡೆಸಿ ತನಿಖಾ ವರದಿಯನ್ನು ಪಡೆಯಲಾಗಿದೆ. ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಈ ಪ್ರಶ್ನೆಯು ಉತ್ತರವಾಗಿ ಈ ಪ್ರಕರಣದಲ್ಲಿ ಸಿ.ಒ.ಡಿ. ಯಿಂದ ತನಿಖೆ ನಡೆಸಿ ತನಿಖಾ ವರದಿಯನ್ನು ಪಡೆಯಲಾಗಿದೆ. ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಹೇಳಿದ್ದೀರಿ. ಆ ತನಿಖೆಯ ರಿಪೋರ್ಟ್ ಏನು ಇದೆ ಅದನ್ನು ಈ ಸದನಕ್ಕೆ ಒಪ್ಪಿಸಬೇಕು ಮತ್ತು ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಈ ಬಗ್ಗೆ ಏನು ಅಪಾಧನೆ ಮಾಡಿದ್ದಾರೆ ಅದರ ಬಗ್ಗೆ ತನಿಖೆಯಾಗಿ ಆ ವರದಿ ಸರ್ಕಾರಕ್ಕೆ ಡಿಸೆಂಬರ್‌ನಲ್ಲಿ ಬಂತು. ಅದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ ಯಾರ್ಯಾರ ಮೇಲೆ ಏನೇನು ಡಿಸ್ಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕೋ ಮತ್ತು ಏನು ಮಾಡಬೇಕು ಅನ್ನುವುದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಇದರಲ್ಲಿ ಯಾರ್ಯಾರು ತಪ್ಪಿತಸ್ಥರು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಮಂಜುನಾಥ್.—ಆ ವಿವರಣೆಯನ್ನು ಈಗ ಹೇಳಬೇಕಾಗಿಲ್ಲ. ಈಗ ಅವರು ಪ್ರಿಲಿಮಿನರಿ ರಿಪೋರ್ಟ್ ಅನ್ನು ನಮಗೆ ಕಳುಹಿಸಿದ್ದಾರೆ. ಆ ವರದಿಯನ್ನು ನೋಡಿ ತನಿಖೆ ಮಾಡಿ ಆನಂತರ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಮಾನ್ಯ ಅಧ್ಯಕ್ಷರೆ, ಅವರು ಸರಿಯಾಗಿ ಉತ್ತರ ಹೇಳಿಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರಲ್ಲ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಅದು ಹಾರಿಕೆಯ ಉತ್ತರವಾಯಿತು. ಉತ್ತರವನ್ನು ಸಮರ್ಪಕವಾಗಿಯೇ ಹೇಳಿದ್ದೇನೆ. ಸರ್ಕಾರೀ ಮುದ್ರಣಾಲಯದಲ್ಲಿ ೭೭೪ ಮಂದಿಗೆ ೨೦ ಮಂದಿ ಬಂದಿದ್ದಾರೆಂದು, ಪಂಚ್ ಮಾಡಿದ್ದಾರೆ. ಈ ಬಗ್ಗೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ಈಗಾಗಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆಲ್ಲಿ ಡೈರೆಕ್ಟರ್ ಆನ್ನು ವರ್ಗಾವಣೆ ಮಾಡಿ ಬೇರೆ ಒಬ್ಬರನ್ನು ಹಾಕಿದ್ದೇವೆ. ಮುಂದೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಆದಷ್ಟು ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಯಾರ್ಯಾರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿಲ್ಲ. ಅವರು ಕೋಟಿ ಗಟ್ಟಲೆ ತಪ್ಪು ಮಾಡಿದ್ದರೂ ಕೂಡ ಅವರನ್ನು ವರ್ಗಾವಣೆ ಮಾಡುತ್ತೀರಿ ಅಷ್ಟೆ. ಉತ್ತರ ಕೊಟ್ಟಿರುವುದು ಸಮಾಧಾನಕರವಾಗಿಲ್ಲ.

ಶಿಕಾರಿಪುರದಲ್ಲಿ ಲೋಕೋಪಯೋಗಿ ಕಾಮಗಾರಿಗಳು

೩೬. (೧೯೭೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯ ಮೂಲಕ ಹೊಸದಾಗಿ ಪ್ರಾರಂಭಿಸಲು ಸೇರಿದ ಕಾಮಗಾರಿಗಳ ಸಂಖ್ಯೆ ಎಷ್ಟು ?

ಆ) ಈಗಾಗಲೇ ಸರಕಾರದ ಮಂಜೂರಾತಿ ದೊರೆತು ಸಂಬಂಧಪಟ್ಟ ಅಧಿಕಾರಿಗಳಿಗೆ ಟೆಂಡರ್ ಕರೆಯಲು ಕಳಿಸಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ?

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಮೇಲ್ಕಂಡಂತೆ ಹೊಸದಾಗಿ ಮಂಜೂರಾಗಿ ಟೆಂಡರ್ ಕರೆದ ಕಾಮಗಾರಿಗಳೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ರಸ್ತೆ ಮತ್ತು ಸೇತುವೆಗಳು. — ೬
ಸಣ್ಣ ನೀರಾವರಿ — ೪

ಆ) ರಸ್ತೆ ಮತ್ತು ಸೇತುವೆಗಳು. — ೪
ಸಣ್ಣ ನೀರಾವರಿ — ಇಲ್ಲ

ಇ) ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಹೊಸ ಕೆಲಸಗಳಿಗೆ ಟೆಂಡರ್ ಕರೆದಿರುವ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು ಕೆಳಗೆ ಕೊಡಲಾಗಿದೆ :—

	ತಾಲ್ಲೂಕು	ಸಪೂರ್ಕ ಮತ್ತು ಕಟ್ಟಡಗಳು	ಸಣ್ಣ ನೀರಾವರಿ
೧)	ಶಿವಮೊಗ್ಗ	೩	—
೨)	ಭದ್ರಾವತಿ	೯	—
೩)	ಹೊನ್ನಾಳಿ	೪	—
೪)	ತೀರ್ಥಹಳ್ಳಿ	೫	—
೫)	ಚನ್ನಗಿರಿ	೯	—
೬)	ಸಾಗರ	೨	೧
೭)	ಪೊಸನಗರ	೩	—
೮)	ಸೊರಬ	೩	—
೯)	ಶಿಕಾರಿಪುರ	೨	—